ಸಾಕ್ಷಿಯು ಕ್ರಮವಾಗಿ ಪ್ರಮಾಣೀಕರಿಸಿದ ದಿನಾಂಕಃ **19-09-2024**

ಪಾಟಿ ಸವಾಲುಃ ಶ್ರೀ. ಎನ್.ಸಿ.ಸಿ ಯವರಿಂದ

ನಾನು ಹುಲ್ಕೊಡು ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ, ಅಲ್ಲಿ ಕನ್ನೇಶ್ವರ ಸ್ವಾಮಿ ದೇವಸ್ಥಾನ ಇದೆ. ದಾವಾ ಆಸ್ತಿಗಳೆಲ್ಲ ಆ ದೇವಸ್ಥಾನಕ್ಕೆ ಸೇರಿದ ಆಸ್ತಿಗಳು ಎಂದರೆ ಸರಿ. ನನಗೂ ಮತ್ತು ದಾವಾ ಆಸ್ತಿಗಳಿಗೂ ವೈಯಕ್ತಿಕವಾಗಿ ಯಾವುದೇ ಸಂಬಂಧ ಇಲ್ಲ. ಅದು ದೇವಸ್ಥಾನಕ್ಕೆ ಸೇರಿದ ಆಸ್ತಿ. ದೇವಸ್ಥಾನದ ಜಮೀನು ಜೋಡಿ ಜಮೀನು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಈಗಿನ ಮತ್ತು ಹಿಂದಿನ ಪಹಣಿ ನೋಡಿರುತ್ತೇನೆ. ನಿಡಿ **1** ರಿಂದ **3** ರಲ್ಲಿರುವ **9** ನೇ ಕಲಂನಲ್ಲಿ ತೋರಿಸಿರುವ ಈರೇಗೌಡ ಮತ್ತು ನಿಂಗಪ್ಪ ಈಗ ಮೃತ ಪಟ್ಟಿರುತ್ತಾರೆ. ರತ್ನಮ್ಮ ರವರ ತಂದೆ ಹೆಸರು ವೀರಯ್ಯ ಇರುತ್ತದೆ. ಅವರು ನಮ್ಮ ಗ್ರಾಮದಲ್ಲಿದ್ದರು. ವೀರಯ್ಯ ರವರಿಗೆ **4-5** ಜನ ಮಕ್ಕಳಿರಬಹುದು ನನಗೆ ಸರಿಯಾಗಿ ಗೊತ್ತಿಲ್ಲ.

ಆ ವೀರಯ್ಯ ರವರು ಕನ್ನೇಶ್ವರ ದೇವಸ್ಥಾನದ ಪೂಜಾರಿ ಆಗಿದ್ದರು ಎಂದರೆ ಸರಿಯಲ್ಲ. ವೀರಯ್ಯ ರವರು ನಾನು ದೇವಸ್ಥಾನದ ಪೂಜಾರಿ ಆದ್ದರಿಂದ ಜಮೀನುಗಳನ್ನು ನನ್ನ ಹೆಸರಿಗೆ ಮಾಡಿಕೊಡಿ ಎಂದು ಭೂ ನ್ಯಾಯ ಮಂಡಳಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ. ವೀರಯ್ಯ ಕೊಟ್ಟ ಅರ್ಜಿ ಮೇಲೆ ಯಾವ ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ವೀರಯ್ಯ ಮೃತ ಪಟ್ಟಿರುತ್ತಾರೆ. ವೀರಯ್ಯ

ರವರಿಗೆ ನಂಜುಂಡಯ್ಯ ಎಂಬ ಮಗ ಇದ್ದರು. ವೀರಯ್ಯ ಮರಣದ ನಂತರ ನಂಜುಂಡಯ್ಯ ಮತ್ತು ರತ್ನಮ್ಮ ಸೇರಿ ದಾವಾ ಆಸ್ತಿಯನ್ನು ತಮಗೆ ಮಂಜೂರು ಮಾಡುವಂತೆ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. **1992** ರಿಂದ **2018** ರವರೆಗೂ ಸದರಿ ಅರ್ಜಿ ವಿಚಾರಣೆ ಆಗಿದೆ ಎಂದರೆ ಸರಿ. ಆ ರೀತಿ ವಿಚಾರಣೆ ಆಗುವ ಕಾಲಕ್ಕೆ ನಾನು ಹೋಗಿಲ್ಲ.

ಭೂ ನ್ಯಾಯಾ ಮಂಡಳಿಯಲ್ಲಿ ವಿಚಾರಣೆ ಆಗಿ ನಂಜುಂಡಯ್ಯ ಮತ್ತು ರತ್ನಮ್ಮ ಹಕ್ಕುದಾರರು ಎಂದು ತೀರ್ಮಾನ ಆಗಿದೆ ಎಂದರೆ ಸರಿ. ಆ ಜಮೀನಿಗೆ ಕಾನೂನು ಪ್ರಕಾರ ಹಣ ಕಟ್ಟಿ ಮಂಜೂರು ಪತ್ರ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮಂಜೂರಾದ ನಂತರ ದಾವಾ ಆಸ್ತಿಯ ಖಾತೆ ರತ್ನಮ್ಮ ಮತ್ತು ನಂಜುಂಡಯ್ಯ ರವರ ಮಕ್ಕಳ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಈ ದಾವೆ ಹಾಕುವ ಕಾಲಕ್ಕೆ ದಾವಾ ಜಮೀನುಗಳ ಪಹಣಿ ವಾದಿಗಳ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ಜಮೀನಿನ ಸ್ವಾಧೀನ ಸಹ ರತ್ನಮ್ಮ ರವರ ತಂದೆಯ ಕಾಲದಿಂದಲೂ ಅವರಲ್ಲೇ ಇತ್ತು ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು** ಮಾಡ**ಲಾಗಿದೆ).**

ಸಹಿ/-
**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**